## ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 686 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 11.12.2023 |
| ಪ್ರಶ್ನೆ | ಉತ್ತರ |
| ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು ತಿಪ್ಪಸಂದ್ರ ಹೋಬಳಿಯಲ್ಲಿ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರ 100 ಎಕರೆ ಜಮೀನು ಮಂಜೂರು ಮಾಡಿರುವುದು ನಿಜವೇ; ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ತೆಗೆದುಕೊಂಡಿರುವ ಕ್ರಮವೇನು: ಕ್ರಮಕೈಗೊಂಡಿದ್ದಲ್ಲಿ, ಕಟ್ಟಡದ ಕಾಮಗಾರಿಯ ಪ್ರಗತಿ ಯಾವ ಹಂತದಲ್ಲಿದೆ?(ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 112 ಎಲ್‌ಜಿಬಿ 2012, ದಿನಾಂಕ:30.03.2013 ರನ್ವಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ 100 ಎಕರೆ ಜಮೀನನ್ನು ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ ಸರ್ವೆ ನಂಬರ್ 40 ರಲ್ಲಿ ಅಧಿಕೃತವಾಗಿ ಮಂಜೂರು ಮಾಡಲಾಗಿರುತ್ತದೆ.<br><br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದೊಂದಿಗೆ ಎಂ.ಓ.ಯು (MoU) ಒಪ್ಪಂದದನ್ವಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಬಾಲಕ/ಬಾಲಕಿಯರ ವಸತಿ ನಿಲಯ ಹಾಗೂ ಆಡಳಿತ ಕಛೇರಿ ಮತ್ತು ಶೈಕ್ಷಣಿಕ ಭವನದ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಶೇಕಡ 70% ರಷ್ಟು ಕಟ್ಟಡ ಕಾಮಗಾರಿ ಪೂರ್ಣಗೊಂಡಿರುತ್ತದೆ.<br><br>ಮುಂದುವರೆದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ 100 ಎಕರೆ ಜಮೀನನ್ನು ಅಳತೆ ಮಾಡಿ, ಗಡಿ ಗುರುತಿಸಿ, ಸ್ಕೆಚ್ ಸಿದ್ಧಪಡಿಸಿ ಹಾಗೂ ದುರಸ್ತಿಮಾಡಿಕೊಡಬೇಕೆಂದು ಸಂಸ್ಕೃತ ವಿಶ್ವವಿದ್ಯಾಲಯವು ರಾಮನಗರ ತಹಸೀಲ್ದಾರ್ ಇವರಿಗೆ ದಿನಾಂಕ:17.08.2023ರಂದು ಕೋರಿರುತ್ತಾರೆ (ಮಾಹಿತಿಯನ್ನು ಅನುಬಂಧ ದಲ್ಲಿರಿಸಿದೆ). |

ಸಂಖ್ಯೆ: ಇಡಿ 231 ಯುಎನ್‌ಇ 2023

(ಡಾ ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

कर्नाटक-संस्कृत-विश्वविद्यालय:

श्री चामराजेन्द्र संस्कृत महाविद्यालय परिसर:

पम्पमहाकविमार्ग:, चामराजपेट, बेंगलूरु - 560018

ಚಾಮರಾಜಪೇಟೆ, ಬೆಂಗಳೂರು - 560018.

ಸಂಖ್ಯೆ: ಕಸಂವಿ/ತಿ.ಸ.ಜ.ಭಾ-2/2020-21 /87

ದಿನಾಂಕ: 17.08.2023

ಇವರಿಗೆ,

ಮಾನ್ಯ ತಹಶೀಲ್ದಾರರವರು

ಮಾಗಡಿ ತಾಲ್ಲೂಕು, ಮಾಗಡಿ

ರಾಮನಗರ ಜಿಲ್ಲೆ

ಮಾನ್ಯರೆ,

ವಿಷಯ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ತಿಪ್ಪಸಂದ್ರ ಸರ್ವೇ ನಂ. 40ರ 100 ಎಕರೆ ಜಮೀನನ್ನು ಅಳತೆ ಮಾಡಿ ದುರಸ್ಥಿ ಮಾಡುವ ಬಗೆಗೆ.

ಉಲ್ಲೇಖ:-1. ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ 112,ಎಲ್‌ಜಿಬಿ 2012, ಬೆಂಗಳೂರು, ದಿನಾಂಕ 30.03.2013

2. ಮಿಟೇಶನ್ ರಿಜಿಸ್ಟರ್ ಪ್ರತಿ

3. ಆರ್.ಟಿ.ಸಿ(ಪಹಣಿ)

4. ಮಾನ್ಯ ತಹಶೀಲ್ದಾರ ರವರು, ನೀಡಿರುವ ಪೋಡಿ ನಕ್ಷೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ಗ್ರಾಮದ ಸರ್ವೇ ನಂ.40ರಲ್ಲಿ ಉಲ್ಲೇಖ(01)ರ ಆದೇಶದಂತೆ 100ಎಕರೆ ಜಮೀನನ್ನು ಸರ್ಕಾರ ಮಂಜೂರು ಮಾಡಿದ್ದು ಸದರಿ ಮಂಜೂರಾಗಿರುವ ಜಮೀನಿನಲ್ಲಿ ವಿಶ್ವವಿದ್ಯಾಲಯದ ಕ್ಯಾಂಪಸ್ ಅಭಿವೃದ್ಧಿ ಪಡಿಸಿ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಆದರೆ ಉಲ್ಲೇಖ (02) ಮತ್ತು (03)ರಂತೆ ನಮ್ಮ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 100 ಎಕರೆ ಜಮೀನಿಗ ಸಂಬಂಧಿಸಿದ ಪಹಣಿಯಲ್ಲಿ ಹಾಗೂ ಮಿಟೇಶನ್ ರಿಜಿಸ್ಟರ್ ಪ್ರತಿಯನ್ನು ಗಮಿಸಿದಾಗ ಸ್ವಾಧೀನನದಾರನ ಹೆಸರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಎಂದು ಉಲ್ಲೇಖವಾಗಿರುತ್ತದೆ. ಉಲೇಖ (04)ರಂತೆ ಪೂಡಿ ನಕ್ಷೆಯನ್ನು ನೀಡಲಾಗಿರುತ್ತದೆ.

ಆದರೆ ಮುಂದುವರಿದು ಇಲ್ಲಿಯವರಗೂ ದುರಸ್ಥಿಯಾಗದಿರುವುದರಿಂದ 100 ಎಕರೆ ಜಮೀನನ್ನು ಅಳತೆಮಾಡಿ, ಗಡಿ ಗುರುತಿಸಿ, ಸ್ಕೆಚ್ ಸಿದ್ಧಪಡಿಸಿ ಹಾಗೂ ದುರಸ್ಥಿಮಾಡಿಕೊಡಬೇಕೆಂದು ಈ ಮೂಲಕ ಕೋರುತ್ತಿದ್ದೇವೆ.

ವಂದನೆಗಳೊಂದಿಗೆ,

17/8/23

ಕುಲಸಚಿವರು

**ಕುಲಸಚಿವರು**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
**ಬೆಂಗಳೂರು - 560018.**

ಪ್ರತಿಗಳು:1. ಮಾನ್ಯ ಜಿಲ್ಲಾಧಿಕಾರಗಳು, ಕಂದಾಯ ಭವನ, ರಾಮನಗರ ಜಿಲ್ಲೆ.

2. ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪನಿರ್ದೇಶಕರು, ರಾಮನಗರ

3. ಕಛೇರಿ ಪ್ರತಿ

21/8/23

LND 19/8/23

ಸ್ವೀಕೃತಿ ದಿನಾಂಕ 21/8/2023

# ರೆಕಾರ್ಡ್ ಆಫ್ ರೈಟ್ಸ್ , ಗೇಣಿ ಮತ್ತು ಪಹಣಿ ಪತ್ರಿಕೆ (RTC) ಫಾರಂ ನಂ.೧೬


Valic from 31/01/2015 16:23:00 To Till Date

ಗ್ರಾಮ ನಮೂನೆ 2

ತಾಲ್ಲೂಕು ಮೊಹರು ತಾಲ್ಲೂಕು : ಮಾಗಡಿ ಹೋಬಳಿ : ತಿಪ್ಪಸಂದ್ರ ಗ್ರಾಮ : ತಿಪ್ಪಸಂದ್ರ ಪುಟದ ಕ್ರಮ ಸಂಖ್ಯೆ :

| 1. ಸರ್ವೆ ನಂಬರ್ | 3. ಪೋಟುವಾರು | ಎಕರೆ ಗುಂಟೆ ಆ | 4. ಕಂದಾಯ | ರೂ. ಪೈ. | 9. ಕಬ್ಜೆ ಅಥವಾ ಸ್ವಾಧೀನದಾರನ ಹೆಸರು - ತಂದೆಯ ಹೆಸರು ಮತ್ತು ವಿಳಾಸ | ವಿಸ್ತೀರ್ಣ ಎ ಗುಂ | ಖಾತೆ ಸಂ. | 10. ಕಬ್ಜೆ ಅಥವಾ ಸ್ವಾಧೀನತೆಯ ರೀತಿ | 11. ಇತರೆ ಹಕ್ಕುಗಳು ಮತ್ತು ಋಣಗಳು: ಹಕ್ಕುಗಳು : | ಋಣಗಳು : |
|---|---|---|---|---|---|---|---|---|---|---|
| 40 | ಒಟ್ಟು ವಿಸ್ತೀರ್ಣ<br>ಪೋಟ್ ಖರಾಬ್ (ಅ)<br>ಪೋಟ್ ಖರಾಬ್ (ಬ)<br>ಉಳಿದದ್ದು | | (ಅ) ಭೂ ಕಂದಾಯ<br>(ಬ) ಜೋಡಿ<br>(ಕ) ಸೆಸ್ಸುಗಳು<br>(ಡ) ನೀರಿನ ದರ<br>ಒಟ್ಟು | | ಚಂದ್ರಪ್ಪ ಕೋಂ ಲೇ ಪ್ರಕಾಶ್ | 0.24.00.00 | 165 | MR H53/20112012<br>10/04/2012 ಪೌತಿ | | LNDSR(3) 90/92-93.ದಿ: 04/08/1994. 15 ವರ್ಷಗಳ ಕಾಲ ಪರಬಾರೆ ನಿಷೇಧಿಸಿದೆ. |
| 2. ಹಿಸ್ಸಾ | | | | | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | 100.00.00.00 | 100 | MR H14/2013-2014<br>24/09/2013 ಮಂಜೂರು | | |
| 5. ಮಣ್ಣಿನ ನಮೂನೆ | 7. ಮರಗಳ ಸಂಖ್ಯೆ: ಹೆಸರು / ಸಂಖ್ಯೆ | 8. ಪೋಟುವಾರು ಪ್ರಕಾರ ನೀರಾವರಿಯ ವಿಸ್ತೀರ್ಣ: ಕ್ರ. ಸ. / ನೀರಾವರಿ ಮೂಲ / ಮುಂಗಾರು / ಹಿಂಗಾರು / ಬಾಗಾಯ್ತು / ಒಟ್ಟು | | | ನರಸಿಂಹಚಾರ್ | 2.00.00.00 | 1 | MR H73/2013-2014<br>03/06/2014 ಮಂಜೂರು | | |
| 6. ಪಟ್ಟಾ | | | | | | | | | | |

494646433430164333314643374345

12. ಸಾಗುವಳಿ ಮತ್ತು ಗೇಣಿಯ ವಿವರಗಳು

| ವರ್ಷ ಮತ್ತು ಕಾಲ 1 | ವ್ಯವಸಾಯಗಾರನ ಹೆಸರು ಮತ್ತು ವಾಸಸ್ಥಳ 2 | ಸಾಗುವಳಿ ಪದ್ಧತಿ 3 | ಗೇಣಿಯ ವಿವರ: ವಿಸ್ತೀರ್ಣ ಎ ಗುಂ 4 | ಗುತ್ತಿಗೆ 5 | ಭೂಮಿಯ ಉಪಯೋಗ: ವರ್ಗ 6 | ವಿಸ್ತೀರ್ಣ ಎ ಗುಂ 7 | ಖುಷ್ಕಿ, ಬಾಗಾಯ್ತು 8 | 13. ಬೆಳೆಯ ಹೆಸರು 9 | ಬೆಳೆಯ ವಿಸ್ತೀರ್ಣ: ಅಚ್ಚು 10 | ಮಿಶ್ರ 11 | ಒಟ್ಟು 12 | ನೀರಾವರಿಯ ಮೂಲ 13 | ಬೆಳೆಯ ಉತ್ಪತ್ತಿ 14 | ಮಿಶ್ರ ಬೆಳೆಗಳ ಒಟ್ಟು: ಮಿಶ್ರಣದ ಹೆಸರು 15 | ವಿಸ್ತೀರ್ಣ ಎ. ಗುಂ 16 |
|---|---|---|---|---|---|---|---|---|---|---|---|---|---|---|---|
| | | | | | | | | | | | | | | | |

ವಿಸ್ತೀರ್ಣ ಎಕರೆ ಮತ್ತು ಗುಂಟೆಗಳಲ್ಲಿ

ದಿನಾಂಕ:03/08/2023 10:23 ಮೊತ್ತ: ರೂ. 25

ಕರ್ನಾಟಕ ಭೂಕಂದಾಯ ನಿಯಮಾವಳಿ 1966 ರ ನಿಯಮ 40, 42, 58 ಮತ್ತು 70